ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:19/2024

ಚಾಸಾ:3 ಪ್ರಾಸಾ:1

ದಿನಾಂಕ: 26.03.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಚಂದ್ರಕಾಂತ ಶೈಣೈ |
| ತಂದೆಯ ಹೆಸರು | : | ದೇವರಾಜ ಶೈಣೈ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಉಡುಪಿಯಿಂದ ಕುಂದಾಪುರಕ್ಕೆ ಹೋಗುವ ರಾ.ಹೆದ್ದಾರಿಯ ಸರ್ವಿಸ್ ರಸ್ತೆಯಲ್ಲಿ ನನ್ನ ಅಟೋ ಮೊಬೈಲ್ ಅಂಗಡಿ ಇದ್ದು, ಸುಮಾರು 1 ವರ್ಷಗಳ ಹಿಂದೆ ಅಪಘಾತವಾಗಿದ್ದು, ಪೊಲೀಸ್ ಜೀಪು ಒಬ್ಬ ವ್ಯಕ್ತಿಗೆ ಡಿಕ್ಕಿ ಪಡಿಸಿರುವುದಾಗಿ ಪೊಲೀಸರು ನನಗೆ ತಿಳಿಸಿ ನಮ್ಮ ಅಂಗಡಿಯಲ್ಲಿ ಪಂಚನಾಮೆ ಬರೆದು ನನ್ನ ಸಹಿ ಪಡೆದರು. ನಾನು ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಆಗ ಪೊಲೀಸರು ಪೋಟೋ ತೆಗೆದಿರುತ್ತಾರೆ. ನಾನು ಅಪಘಾತವನ್ನು ನೋಡಿಲ್ಲ.

ಸಾಕ್ಷಿಗೆ ಮಹಜರು ಮತ್ತು ನಕ್ಷೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಯನ್ನು ನಿಪಿ-1 ಮತ್ತು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋದಲ್ಲಿ ತನ್ನನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಕೆಎ-20-ಜಿ-0726 ಪೊಲೀಸ್ ಜೀಪನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 13-11-2023 ರಂದು ಅಪಘಾತವಾದ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿದ್ದು, ನಾನು ತೋರಿಸಿದ ಸ್ಥಳದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ಮಧ್ಯಾಹ್ನ 12 ರಿಂದ 12-45ರವರೆಗೆ ಪಂಚನಾಮೆ ಮತ್ತು ನಕ್ಷೆ ತಯಾರಿಸಿ ಪೋಟೋ ತೆಗೆದು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಈ ವಿಚಾರವಾಗಿ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ವಾಹನವನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದ್ರಿ ಅಪಘಾತದ ಪ್ರತ್ಯಕ್ಷದರ್ಶಿಯಾಗಿದ್ದು ಚಾಸಾ-2 ರವರಿಗೆ ಗಾಯಗಳಾಗಿರುವುದನ್ನು ನೋಡಿದ್ದು, ಆತನನ್ನು ಆಸ್ಪತ್ರೆಗೆ ಸ್ಥಳಾಂತರಿಸುವಲ್ಲಿ ಸಹಾಯ ಮಾಡಿದ್ದರೂ ಆರೋಪಿ ಪೊಲೀಸರು ಆದ ಕಾರಣ ಹಾಗೂ ಮೇಲೆ ಹೇಳಿದ ಕ್ರಮವನ್ನು ನನ್ನ ಸಮಕ್ಷಮ ಜರುಗಿಸಿದ್ದರೂ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ವಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ ಸಿ ಎಸ್ ರವರಿಂದಃ</u>**

ಅಪಘಾತದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನಾನು ಸಹಿ ಹಾಕಿದ ಪೇಪರಿನಲ್ಲಿ ಏನು ಇತ್ತು ಎಂದು ನನಗೆ ತಿಳಿದಿಲ್ಲ. ಘಟನಾ ಸ್ಥಳವನ್ನು ಪೊಲೀಸರು ತೋರಿಸಿರುತ್ತಾರೆ ಎಂದರೆ ಸರಿ. ಅಘಟನಾ ಸ್ಥಳದಿಂದ ನಮ್ಮ ಅಂಗಡಿ 60 ಮೀಟರ್ ದೂರದಲ್ಲಿ ಇದೆ. ಬೇರೆಯವರು ಹೇಳಿದ ಮೇರೆಗೆ ಅಪಘಾತವಾದ ವಿಚಾರ ನನಗೆ ತಿಳಿದು ಬಂದಿರುತ್ತದೆ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**